

ನೌಕರ: ಸಾರ್, ಈ ಶರ್ಟ್‌ನಲ್ಲಿ ನೀವು ತುಂಬಾ ಚೆನ್ನಾಗಿ ಕಾಣಿಸುತ್ತಿರುವಿರಿ.

ಮೆನೇಜರ್: ರಜೆ ಏನೂ ಸಿಗುವುದಿಲ್ಲ...!

ನೌಕರ: ಸಾರ್. ಕೇವಲ ಶರ್ಟ್ ಚೆನ್ನಾಗಿದೆಯೆಂದು ಹೇಳಿದ್ದು, ಮುಖ ಎಂದಿನಂತೆ ಕೋತಿ ತರಹವೇ ಇದೆ...!

★★★

ನವವಿವಾಹಿತೆ ಸೊಸೆ ಅಡುಗೆ ಪುಸ್ತಕ ನೋಡಿ ಅಡುಗೆ ಮಾಡುತ್ತಿದ್ದಳು. ಹೊರಗಿಂದ ಆಗಮಿಸಿದ ಅತ್ತೆ ಫ್ರಿಜ್‌ನ ಬಾಗಿಲು ತೆರೆದವಳೇ. 'ಅರೆ, ಮಂದಿರದ ಘಂಟೆಯನ್ನು ಇದರೊಳಗೆ ಯಾರು ಇಟ್ಟರು?' ಎಂದು ಪ್ರಶ್ನಿಸಿದಳು.

ಸೊಸೆ: ಎಲ್ಲಾ ಸಾಮಾನುಗಳ ಮಿಶ್ರಣ ಮಾಡಿ ಒಂದು ಗಂಟೆ ಫ್ರಿಜ್‌ನೊಳಗಿಡಬೇಕೆಂದು ಈ ಪುಸ್ತಕದಲ್ಲಿ ಬರೆಯಲಾಗಿದೆ. ಅದಕ್ಕೇ ಇಟ್ಟುಬಿಟ್ಟೆ!

★★★

ಇಬ್ಬರು ಅವಳಿ ಮಕ್ಕಳು ತಮ್ಮ ಕೋಣೆಯಲ್ಲಿ ಕೂತಿದ್ದರು. ಒಬ್ಬ ಪೆಚ್ಚುಮೋರೆ ಹಾಕಿ ಕೂತಿದ್ದ. ಇನ್ನೊಬ್ಬ ಬಿದ್ದು ಬಿದ್ದು ನಗುತ್ತಿದ್ದ.

ಅಪ್ಪ: ಯಾಕೋ ಇಷ್ಟೊಂದು ನಗುತ್ತಿರುವೆ?

ಮಗು: ನಡುಗುತ್ತಿರುವ ಈ ಚಳಿಯಲ್ಲಿ ಅಮ್ಮ ಎರಡು ಬಾರಿಯೂ ಇವನಿಗೇ ಸ್ನಾನ ಮಾಡಿಸಿ ಬಿಟ್ಟಳು..!

★★★

ಜಿಪುಣನೋರ್ವ ನೆರೆಮನೆಯ ಶ್ರೀಮಂತನಿಗೆ ರಕ್ತದಾನ ಮಾಡಿ ಜೀವ ಉಳಿಸಿದ. ನೆರೆಮನೆಯಾತ ಪ್ರಸನ್ನನಾಗಿ ಆತನಿಗೆ ಮರ್ಸಿಡಿಸ್ ಕಾರ್ ಕೊಡಿಸಿದ.

ನೆರೆಮನೆಯಾತನಿಗೆ ಇನ್ನೊಮ್ಮೆ ರಕ್ತದ ಅವಶ್ಯಕತೆ ಬಿದ್ದಾಗಲೂ ಜಿಪುಣ ತನ್ನ ರಕ್ತ ನೀಡಿದ.

ಪ್ರತಿಯಾಗಿ ಆತ ಲಡ್ಡು ನೀಡಿದ.

ಜಿಪುಣ: (ಸಿಟ್ಟಿನಿಂದ) ಈ ಸಲ ಕೇವಲ ಲಡ್ಡು...?

ನೆರೆಮನೆಯಾತ: ಈಗ ನನ್ನ ದೇಹದಲ್ಲೂ ಜಿಪುಣನ ರಕ್ತ ಹರಿಯುತ್ತಿದೆ..!

★★★

ಫೇಸ್ ಬುಕ್‌ನಲ್ಲಿ ಹೊಸತಾಗಿ ಪರಿಚಯವಾಗಿ ಪರಸ್ಪರ ಮೊಬೈಲ್ ನಂಬರ್ ಪಡೆದುಕೊಂಡ ನಂತರ.

ಹುಡುಗಿ: ಹಲೋ ಡಾರ್ಲಿಂಗ್, ಏನು ಮಾಡುತ್ತಿರುವೆ?

ಹುಡುಗ: ಶೇವ್ ಮಾಡುತ್ತಿದ್ದೇನೆ.

2 ಗಂಟೆಗಳ ನಂತರ,

ಹುಡುಗಿ: ಈಗೇನು ಮಾಡುತ್ತಿರುವೆ ಜಾನೂ...

ಹುಡುಗ: ಶೇವ್ ಮಾಡುತ್ತಿದ್ದೇನೆ.

ಹುಡುಗಿ: ನಾನು ಪ್ರತಿಬಾರಿ ಫೋನ್ ಮಾಡುವಾಗಲೂ ನೀನು ಶೇವ್ ಮಾಡುತ್ತಲೇ ಇರುವುದಾಗಿ ಹೇಳುತ್ತಿರುವೆ, ಏನು ವಿಷಯ? ದಿನಕ್ಕೆಷ್ಟು ಬಾರಿ ನೀನು ಶೇವ್ ಮಾಡುವೆ?

ಹುಡುಗ: 30 ರಿಂದ 40 ಬಾರಿ. ಏಕೆಂದರೆ ನನ್ನದು ಕ್ಷೌರದ ಅಂಗಡಿ!

★★★

ಗುಂಡ: ಬಸ್ಸಿನಲ್ಲಿ ನಿಂತಿದ್ದ ಬ್ರೇಕ್ ಹಾಕಿದಾಗ ಆತ ಮುಂದೆ ನಿಂತಿದ್ದ ಯುವತಿಯೋರ್ವಳ ಮೇಲೆ ಬಿದ್ದ.

ಯುವತಿ: (ಸಿಟ್ಟಿನಿಂದ) ಲೋ... ಏನ್ಮಾಡ್ತಿದ್ದೀಯ...?

ಗುಂಡ: ಫರ್ಸ್ಟ್ ಇಯರ್ ಇಂಜಿನಿಯರಿಂಗ್ ಮತ್ತು ನೀವು...?

★★★

ಡಾಕ್ಟರ್: ಮಗುವಿಗೆ ನೀರು ಕುಡಿಸುವ ಮೊದಲು ಕುದಿಸಿ ಕೊಳ್ಳಬೇಕು.

ಸಂತಾ: ಆದರೆ ಡಾಕ್ಟರ್... ಹಾಗೆ ಕುದಿಸುವುದರಿಂದ ಮಗು ಸತ್ತು ಹೋಗಲಾರದು ತಾನೆ...?

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**




ಶ್ರೀ ಮಂತ್ರಾಲಯದ ಪ್ರಖ್ಯಾತ ಜ್ಯೋತಿಷ್ಯರು

ಗುರುಸಾರ್ವಭೌಮ ಶ್ರೀ ರಾಘವೇಂದ್ರ ಸ್ವಾಮಿಯ ಉಪಾಸಕರು, ದಕ್ಷಿಣ ಭಾರತದಾದ್ಯಂತ ಆರಾಧ್ಯದೈವವೆಂದೇ ಪ್ರಖ್ಯಾತಿ ಪಡೆದು ಶ್ರೀಗುರುರಾಘವೇಂದ್ರ ಸ್ವಾಮಿಯ ಅಪಾರ ದೈವಶಕ್ತಿಯಿಂದ ಅನೇಕ ಜನರ ಸಮಸ್ಯೆಗಳ ಪರಿಹಾರಕ್ಕೆ ಕಾರಣಕರ್ತರಾದ ಪಂ. ಶ್ರೀ ಶ್ರೀ ಕೃಷ್ಣಾಶಾಸ್ತ್ರಿ ಇವರು ಹಸ್ತ ಜಾತಕ, ಭಾವಚಿತ್ರ, ಮುಖಲಕ್ಷಣ ನೋಡಿ ನಿಖರವಾಗಿ ನಿಮ್ಮ ಭವಿಷ್ಯವನ್ನು ಹೇಳುತ್ತಾರೆ. ಸತಿಪತಿ ಕಲಹ, ಆರೋಗ್ಯ, ಮದುವೆ, ಸಂತಾನ, ವಶೀಕರಣ, ಪ್ರೇಮ ವಿಚಾರ, ಕೋರ್ಟ್ ಕೇಸ್, ವಿದೇಶ ಪ್ರಯಾಣ, ಲೈಂಗಿಕ, ಪ್ರಾಣಭಯ, ಶತ್ರುಪೀಡೆ, ಸಾಲದ ಬಾದೆ, ಎಷ್ಟೇ ಸಂಪತ್ತಿದ್ದರೂ ಮನಶಾಂತಿಯ ಕೊರತೆ, ಮಾಟ ಮಂತ್ರ, ದುಷ್ಟಶಕ್ತಿ ಪೀಡೆ ಇನ್ನೂ ನಿಮ್ಮ ಜೀವನದ ಯಾವುದೇ ಕಠಿಣ ಸಮಸ್ಯೆಗಳಿದ್ದರೂ ಪರಿಹಾರ ಶತ:ಸಿದ್ಧ.

ಇಲ್ಲಿಯವರೆಗೂ ತಾವು ಎಷ್ಟೋ ದೈವ ದೇವರು ಪಂಡಿತರಲ್ಲಿ ಪರಿಹಾರ ಕಾಣದೆ ನಂಬಿಕೆ ಕಳೆದುಕೊಂಡು ಜೀವನದಲ್ಲಿ ಜಿಗುಪ್ಸೆ ಹೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿಗೂ ಶ್ರೀ ಗುರು ರಾಘವೇಂದ್ರ ಸ್ವಾಮಿಯ ಪೂಜಾ ಆರಾಧನೆಯಿಂದ ಮತ್ತು ದೈವಶಕ್ತಿಯಿಂದ ಹಾಗೂ ದಕ್ಷಿಣ ಕನ್ನಡದ ಶಾಸ್ತ್ರೋಕ್ತ ಪದ್ಧತಿಯಿಂದ ಕೇವಲ 9 ದಿನದಲ್ಲಿ 100% ಶಾಶ್ವತ ಪರಿಹಾರ ಖಚಿತ.

ದೂರದ ಊರಿನವರಿಗೂ ದೂರವಾಣಿಯ ಮುಖಾಂತರ ಸಲಹೆ ಹಾಗೂ ಪರಿಹಾರ ತಿಳಿಸಲಾಗುವುದು.

ಕಾಯಂ ವಿಳಾಸ: ಪಂಡಿತ್ ಶ್ರೀ ಕೃಷ್ಣ ಶಾಸ್ತ್ರಿ ದುರ್ಗಾಪರಮೇಶ್ವರಿ ಬೇಕರಿ ಹತ್ತಿರ, ಮಾಗಡಿ ಮೇನ್ ರೋಡ್, ಸುಮ್ಮನಹಳ್ಳಿ ಸಿಗ್ನಲ್, ಸುಮ್ಮನಹಳ್ಳಿ, ಬೆಂಗಳೂರು-91

ಮೋ: 9591903121